# ಕರ್ನಾಟಕ ಲೋಕಸೇವಾ ಆಯೋಗ

ಸಂಖ್ಯೆ: ಪಿಎಸ್ ಸಿ ಇ(2) 48/2025-26, ದಿನಾಂಕ:04-06-2025.

## ಪ್ರಕಟಣೆ

ಆಯೋಗದ ಅಧಿಸೂಚನೆ ಸಂಖ್ಯೆ:ಇ(2)581/2023-24/ಪಿಎಸ್‌ಸಿ ಮತ್ತು ಇ(2)582/2023-24/ಪಿಎಸ್‌ಸಿ, ದಿನಾಂಕ:29.02.2024 ರಂದು ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆಯಲ್ಲಿನ "ಭೂಮಾಪಕರ" ಉಳಿಕೆ ಮೂಲ ವೃಂದದ 264 ಮತ್ತು ಹೈದ್ರಾಬಾದ್ ಸ್ಥಳೀಯ ವೃಂದದ 100 ಹುದ್ದೆಗಳಿಗೆ ಅಧಿಸೂಚನೆಗಳನ್ನು ಹೊರಡಿಸಿ, ದಿನಾಂಕ:11.03.2024 ರಿಂದ 10.04.2024ರವರೆಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ನಂತರ ಸದರಿ ಇಲಾಖೆಯವರ ದಿನಾಂಕ:06.07.2024ರ ಪತ್ರದನ್ವಯ ಉಳಿಕೆ ಮೂಲ ವೃಂದದ 296 ಮತ್ತು ಹೈದ್ರಾಬಾದ್ ಸ್ಥಳೀಯ ವೃಂದದ 90 "ಭೂಮಾಪಕರ" ಹೆಚ್ಚುವರಿ ಹುದ್ದೆಗಳಿಗೆ ದಿನಾಂಕ:22.11.2024 ರಂದು ಸೇರ್ಪಡೆ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ ಹಾಗೂ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 166 ಸೇನೆನಿ 2024, ದಿನಾಂಕ:10-09-2024 ರಲ್ಲಿನ ಆದೇಶಕ್ಕೆ ಸಂಬಂಧಿಸಿದಂತೆ ದಿನಾಂಕ:22.11.2024 ರಂದು ತಿದ್ದುಪಡಿ ಅಧಿಸೂಚನೆಯನ್ನು ಪ್ರಕಟಿಸಲಾಗಿರುತ್ತದೆ. ಅದರಂತೆ ಎಲ್ಲಾ ವರ್ಗಗಳಿಗೆ 03 ವರ್ಷಗಳ ವಯೋಮಿತಿ ಸಡಿಲಿಕೆ ನೀಡಿ ಅಭ್ಯರ್ಥಿಗಳು ದಿನಾಂಕ:25.11.2024 ರಿಂದ 09.12.2024ರವರೆಗೆ ಅರ್ಜಿ ಸಲ್ಲಿಸಲು 15 ದಿನಗಳ ಕಾಲಾವಕಾಶವನ್ನು ಕಲ್ಪಿಸಿ, ಅರ್ಜಿಗಳನ್ನು ಸ್ವೀಕರಿಸಲಾಗಿರುತ್ತದೆ.

ತದನಂತರ, ದಿನಾಂಕ:29.03.2025ರ ಸರ್ಕಾರದ ಸುತ್ತೋಲೆ ಕುರಿತಂತೆ ಆಯೋಗದ ದಿನಾಂಕ:08.04.2025ರ ಸಭೆಯಲ್ಲಿ "**ದಿನಾಂಕ:29.03.2025ರ ಸರ್ಕಾರದ ಸುತ್ತೋಲೆಯನ್ವಯ ದಿನಾಂಕ:25.11.2024ರ ನಂತರ ಹೊರಡಿಸಿರುವ ಅಧಿಸೂಚನೆಗಳನ್ನು ಕೂಡಲೇ ಹಿಂಪಡೆಯುವಂತೆ ಸೂಚಿಸಿದ್ದು, ಸದರಿ ಸೂಚನೆಗಳು ದಿನಾಂಕ:28.10.2024 ರಿಂದ ಅನ್ವಯವಾಗುವುದಾಗಿ ಆದೇಶ ಹೊರಡಿಸಿರುವ ಹಿನ್ನೆಲೆಯಲ್ಲಿ ಸದರಿ ನೇಮಕಾತಿ ಕುರಿತಾದ ಕಾರ್ಯಗಳನ್ನು ತಾತ್ಕಾಲಿಕವಾಗಿ ತಡೆಹಿಡಿಯುವುದು ಸೂಕ್ತ**" ಎಂದು ನಿರ್ಣಯಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಸರ್ಕಾರಕ್ಕೆ ದಿನಾಂಕ:07.05.2025 ರಂದು ಸದರಿ ಹುದ್ದೆಗಳ ನೇಮಕಾತಿಯ ಕುರಿತು ಆಯೋಗವು ಇದುವರೆವಿಗೂ ಕೈಗೊಂಡ ಕ್ರಮದ ಬಗೆಗಿನ ವಿವರಗಳುಳ್ಳ ಪತ್ರವನ್ನು ಬರೆಯಲಾಗಿದ್ದು, ಸರ್ಕಾರದ ಸ್ಪಷ್ಟೀಕರಣವನ್ನು ನಿರೀಕ್ಷಿಸಲಾಗುತ್ತಿದೆ ಎಂಬ ಮಾಹಿತಿಯನ್ನು ಅಭ್ಯರ್ಥಿಗಳ ಮಾಹಿತಿಗಾಗಿ ತಿಳಿಸಲಾಗಿದೆ.

ಸಹಿ/-
ಕಾರ್ಯದರ್ಶಿ,
ಕರ್ನಾಟಕ ಲೋಕಸೇವಾ ಆಯೋಗ.